ಉಮರ್ ಬಿನ್ ಖತ್ತಾಬ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರೊಂದಿಗೆ ನಾನು ಒಂದು ಈದ್ನಲ್ಲಿ ಪಾಲ್ಗೊಂಡಿದ್ದೆ. ಅವರು ಹೇಳಿದರು: 'ಇವೆರಡು ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಉಪವಾಸ ಆಚರಿಸುವುದನ್ನು ನಿಷೇಧಿಸಿದ ದಿನಗಳಾಗಿವೆ: ನಿಮ್ಮ ಉಪವಾಸವನ್ನು ಕೊನೆಗೊಳಿಸುವ ದಿನ ಮತ್ತು ನೀವು ನಿಮ್ಮ ಬಲಿಮೃಗದಿಂದ ತಿನ್ನುವ ದಿನ

ಇಬ್ನ್ ಅಝ್ಹರ್ರ ವಿಮೋಚಿತ ಗುಲಾಮ ಅಬೂ ಉಬೈದ್ ರಿಂದ ವರದಿ. "ಉಮರ್ ಬಿನ್ ಖತ್ತಾಬ್ (ಅಲ್ಲಾಹು
ಅವರ ಬಗ್ಗೆ ಸಂಪ್ರೀತನಾಗಲಿ) ರೊಂದಿಗೆ ನಾನು ಒಂದು ಈದ್ನಲ್ಲಿ ಪಾಲ್ಗೊಂಡಿದ್ದೆ. ಅವರು ಹೇಳಿದರು: 'ಇವೆರಡು ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಉಪವಾಸ ಆಚರಿಸುವುದನ್ನು ನಿಷೇಧಿಸಿದ ದಿನಗಳಾಗಿವೆ: ನಿಮ್ಮ ಉಪವಾಸವನ್ನು ಕೊನೆಗೊಳಿಸುವ ದಿನ ಮತ್ತು ನೀವು ನಿಮ್ಮ ಬಲಿಮೃಗದಿಂದ ತಿನ್ನುವ ದಿನ." [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಈದುಲ್-ಫಿತ್ರ್ ಮತ್ತು ಈದುಲ್-ಅದ್ಹಾ ಹಬ್ಬದ ದಿನಗಳಲ್ಲಿ ಉಪವಾಸ ಆಚರಿಸುವುದನ್ನು ನಿಷೇಧಿಸಿದರು. ಈದುಲ್-ಫಿತ್ರ್ ಎಂದರೆ ರಮದಾನ್ ತಿಂಗಳ ಉಪವಾಸವನ್ನು ಕೊನೆಗೊಳಿಸುವ ದಿನವಾಗಿದೆ ಮತ್ತು ಈದುಲ್-ಅದ್ಹಾ ಎಂದರೆ ಬಲಿ ನೀಡಿದ ಮೃಗಗಳ ಮಾಂಸವನ್ನು ತಿನ್ನುವ ದಿನವಾಗಿದೆ.

http://www.sunnah.global/hadeeth/kn/show/4527